ನಿಯಮ 334ರ ಮೇರೆಗೆ

(i) Criminal cases Lodged by the C.R E. Cell against Koli-Dhor and Tokre Koli, Govt. Employees

SRI M. L. USTAD (Bijapur).--The C.R.E. Cell is lodging criminal cases against Koli-Dhor, Tokre Koli Government employees, alleging that they have obtained false caste certificates. The disciplinary action is also initiated against them. When hundreds of such cases against the persons who have alleged to have produced caste certificates as Kadu Kuruba, Nayakar. Maleru, Darvesh etc.,are withdrawn from C.R.E. Cell and due instructions are issued not to take any penal action against them as per G O.No. SWL-104 SAD-61 dated 16th August, 1984, why section of Fisherman community are left at the mercy of CRE Cell.

Whether Government is prepared to issue directions to CRE Cell to withdraw the cases against Koli Dhor, Tokre Koli Government employees by including their cases in the said GO or prepared to withdraw the GO itself so that all should put to judicial scrutiny instead of discrimination and different yard-sticks for different castes. The equality before law should be maintained.

ಶ್ರೀ ಎ. ಲಕ್ಷ್ಮೀಸಾಗರ್ (ಗೃಹ ಮಂತ್ರಿಗಳ ಪರವಾಗಿ).--ಉತ್ತರ ತರಿಸಿಕೊಡುತ್ತೇನೆ.

(ii) ಸಹ್ಯಾದ್ರಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆಯನ್ನೆ ಕೈ ಬಿಡುವ ಬಗ್ಗೆ.

ಶ್ರೀ ಪಟಮಕ್ಕಿ ರತ್ನಾಕರ.--ಯೋಜಿತ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಈಗ ಯೋಚಿಸಿರುವಂತೆ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳು ಹೊಸ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ. ಆದರೆ ಮಲೆನಾಡಿನ ವಿಶಿಷ್ಟ ಜನಜೀವನ ಮತ್ತು ಭೌಗೋಳಿಕ ಗುಣ ಲಕ್ಷಣಗಳಿಂದ ಚಿತ್ರದುರ್ಗ ಜಿಲ್ಲೆಯನ್ನು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿಸುವುದು ಸೂಕ್ತವಲ್ಲ. ಬದಲಾಗಿ ಹಾಸನ, ಇಲ್ಲವೇ ಉತ್ತರ ಕನ್ನಡ ಜಿಲ್ಲೆಯನ್ನು ಈ ವ್ಯಾಪ್ತಿಗೆ ತರುವುದು ಸೂಕ್ತ.

ಈ ಬಗ್ಗೆ ಪತ್ರಿಕೆಗಳಲ್ಲಿ ಸಾರ್ವಜನಿಕವಾಗಿ ಸಾಕಷ್ಟು ಚರ್ಚೆಗೆ ಬಂದಿದೆ. ಈ ಬಗ್ಗೆ ಮಾನ್ಯ ವಿದ್ಯಾ ಸಚಿವರು ಮಲೆನಾಡಿನ ವೈಶಿಷ್ಟ ಭೌಗೋಳಿಕ ಗುಣ ಲಕ್ಷಣ, ಸಂಸ್ಕೃತಿಗಳನ್ನು ಗಮನಿಸಿ ಈ ಬಗ್ಗೆ ಸೂಕ್ತ ಬದಲಾವಣೆ ಮಾಡಬೇಕಾಗಿ ಕೋರುತ್ತೇನೆ. ಮತ್ತು....

ಅಧ್ಯಕ್ಷರು.--ತಾವು ಕೂರಿ. ಇದರ ಮೇಲೆ ಭಾಷಣಕ್ಕೆ ಅವಕಾಶ ಇಲ್ಲ.

ಶ್ರೀ ಡಿ. ಮಂಜುನಾಥ್.--ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಆಗಬೇಕಾದರೆ ಅಕ್ಕ ಪಕ್ಕದ ಜಿಲ್ಲೆಗಳನ್ನು ಸೇರಿಸುತ್ತೇವೆ. ಹಾಸನ ದೂರ ಇದೆ. ಆದು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೇರಿದೆ. ಚಿತ್ರದುರ್ಗ ಶಿವಮೊಗ್ಗಕ್ಕೆ ಅಂಟಿಕೊಂಡಿದೆ. ವಿಶ್ವ ವಿದ್ಯಾನಿಲಯ ಮಂಜೂರಾಗುವ ಸಮಯದಲ್ಲಿ ತೀರ್ಮಾನ ಮಾಡುತ್ತೇವೆ.

ಶ್ರೀ ಪಟಮಕ್ಕಿ ರತ್ನಾಕರ್.--ಇದರ ಬಗ್ಗೆ ಬಹಳಷ್ಟು ತರ್ಕ.....

ಅಧ್ಯಕ್ಷರು.--ಹೀಗೆ ತಾವು ಮಾತನಾಡಿದರೆ ಅದು ಏನೂ ರೆಕಾರ್ಡ್ ಆಗುವುದಿಲ್ಲ. ನಿಮಗೆ ತಿಳಿವಳಿಕೆ ಇದೆಯೋ ಇಲ್ಲವೋ ನಿಯಮ ೩೩೪ರ ಮೇಲೆ ಚರ್ಚೆಗೆ ಅವಕಾಶ ಇಲ್ಲ ಎಂಬುದು ಗೊತ್ತಿಲ್ಲವೆ ರಾತ್ರಿ ಎಲ್ಲ ರಾಮಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನಾಯಿತು ಅಂದ ಹಾಗೆ ಆಯಿತು.